**ಪ್ರಕಟಣೆ ಸಂಖ್ಯೆ ಪಿಡಬ್ಲ್ಯುಡಿ 23 ಆರ್‌ಡಿಎಫ್ 2004 ದಿನಾಂಕ 11-11-2008**

**ಕರ್ನಾಟಕ ಹೆದ್ದಾರಿ ಅಧಿನಿಯಮ 1964 ಪ್ರಕರಣ- 3**

ಕರ್ನಾಟಕ ಹೆದ್ದಾರಿ ಅಧಿನಿಯಮ 1964 (1964ರ ನಿಯಮ-44) ಪ್ರಕರಣ-3 ರಂತೆ ಕರ್ನಾಟಕ ಸರ್ಕಾರವು ಕೆಳಕಂಡ ನಾಮಾಂಕಿತ ರಸ್ತೆಯನ್ನು ರಾಜ್ಯ ಹೆದ್ದಾರಿ-76 ಎಂದು ಘೋಷಿಸಿದೆ.

| **ರಾಜ್ಯ ಹೆದ್ದಾರಿ ಸಂಖ್ಯೆ** | **ಹೆದ್ದಾರಿಯ ವಿವರ** |
|---|---|
| **ರಾಜ್ಯ ಹೆದ್ದಾರಿ 76** | **ಬೀರೂರು ಸಮ್ಮಸಗಿ ರಾಜ್ಯ ಹೆದ್ದಾರಿ (ಅಜ್ಜಂಪುರ, ಶಿವನಿ, ಚನ್ನಗಿರಿ, ಸಂತೆಬೆನ್ನೂರು, ದಾವಣಗೆರೆ, ಹರಿಹರ, ಕೋಡ, ತಿಳವಳ್ಳಿ ಮೂಲಕ)** |
| | **ಕಡೂರು ತಾಲ್ಲೂಕು** |
| | ಈ ರಾಜ್ಯ ಹೆದ್ದಾರಿಯು ಕಡೂರು ತಾಲ್ಲೂಕು ಬೀರೂರು ಟೌನ್ ಸ.ನಂ.3 ರಿಂದ 0.00 ಕಿ.ಮೀರಿಂದ ಪ್ರಾರಂಭವಾಗಿ ದೋಗಿಹಳ್ಳಿ, ಎರೇಹಳ್ಳಿ ಗ್ರಾಮದ ಸ.ನಂ.53ರಲ್ಲಿ ಕಿ.ಮೀ 6.00ರಲ್ಲಿ ಮುಕ್ತಾಯಗೊಂಡು ತರೀಕೆರೆ ತಾಲ್ಲೂಕಿನಲ್ಲಿ ಮುಂದುವರೆಯುತ್ತದೆ. |
| | **ತರೀಕೆರೆ ತಾಲ್ಲೂಕು** |
| | ತರೀಕೆರೆ ತಾಲ್ಲೂಕಿನ ಸೋಮನಹಳ್ಳಿ ಸ.ನಂ.19, 6.00 ಕಿ.ಮೀರಿಂದ ಪ್ರಾರಂಭವಾಗಿ ನಾಗಮಂಗಲ, ಬಗ್ಗೆಬಳ್ಳಿ, ಅಜ್ಜಂಪುರ, ಬುಕ್ಕಾಂಬುದಿ, ಬರಮನಹಳ್ಳಿ ಸ.ನಂ.27ರಲ್ಲಿ ಕಿ.ಮೀ 30.40ರಲ್ಲಿ ಮುಕ್ತಾಯಗೊಂಡು ಚನ್ನಗಿರಿ ತಾಲ್ಲೂಕಿನಲ್ಲಿ ಮುಂದುವರೆಯುತ್ತದೆ. |
| | **ಚನ್ನಗಿರಿ ತಾಲ್ಲೂಕು** |
| | ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಮಸಣಿಕೆರೆ ಗ್ರಾಮ ಸ.ನಂ. 88ರ 30.40 ಕಿ.ಮೀನಿಂದ ಪ್ರಾರಂಭವಾಗಿ ಕರ್ಕಿಕೆರೆ, ಕೊಡಗಿಕೆರೆ, ಮಲ್ಲೇಶ್ವರ, ಕಾಲ್ಕರೆ, ಜಮ್ಮಾಪುರ, ಮೇದುಗೊಂಡನಹಳ್ಳಿ, ಮರವಂಜಿ, ಪಾಂಡೋಮಟ್ಟಿ, ರಾಜಗೊಂಡನಹಳ್ಳಿ, ಹೊನ್ನೆಬಾಗಿ, ಮಾಚನಾಯಕನಹಳ್ಳಿ, ಚನ್ನಗಿರಿ, ಗುರುಪುರ, ಗರಗ, ಗುಲ್ಲಹಳ್ಳಿ, ರಂಗಪುರ, ದೇವರಹಳ್ಳಿ, ನುಗ್ಗಿಹಳ್ಳಿ, ಕಾಕನೂರು, ಸಂತೆಬೆನ್ನೂರು, ಗೆದ್ದಲಹಟ್ಟಿ, ಮಂಗೇನಹಳ್ಳಿ, ಭೀಮನೇರಿ, ತಣಿಗೆರೆ, ಉಪನಾಯಕನಹಳ್ಳಿ ಮುಖಾಂತರ ಹಾದು ಹೋಗಿ ಮರಡಿ ಗ್ರಾಮದ ಸ.ನಂ. 16ರ 83.39 ಕಿ.ಮೀ.ನಲ್ಲಿ ಅಂತ್ಯಗೊಂಡು ಮುಂದೆ ದಾವಣಗೆರೆ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ.<br>**ಓವರ್‌ಲ್ಯಾಪ್:- ಈ ರಸ್ತೆಯು ಕಿ.ಮೀ. 52.00ರಿಂದ 54.40ರವರೆಗೆ ರಾಷ್ಟ್ರೀಯ ಹೆದ್ದಾರಿ-13ರಲ್ಲಿ ಕಿ.ಮೀ. 2.40 ಓವರ್‌ಲ್ಯಾಪ್ ಆಗಿ ಕಿ.ಮೀ. 18.65 ಮುಂದೆ ಹೋಗುತ್ತದೆ. ಕಿ.ಮೀ. 73.05ರಿಂದ 73.25ರವರೆಗೆ ಕುಮಟಾ-ಕಡಮಡಗಿ ರಸ್ತೆ ರಾಜ್ಯ ಹೆದ್ದಾರಿ-48ರಲ್ಲಿ ಕಿ.ಮೀ. 0.20 ಓವರ್‌ಲ್ಯಾಪ್ ಆಗಿ ಕಿ.ಮೀ. 10.14 ಮುಂದೆ ಹೋಗಿ ದಾವಣಗೆರೆ ತಾಲ್ಲೂಕಿನಲ್ಲಿ ಮುಂದುವರೆಯುತ್ತದೆ.** |
| | **ದಾವಣಗೆರೆ ತಾಲ್ಲೂಕು** |
| | ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಬಾಡ ಗ್ರಾಮ ಪಂಚಾಯತಿ ವ್ಯಾಪ್ತಿಯ ಸ.ನಂ. 91ರ 83.39 ಕಿ.ಮೀ.ನಿಂದ ಪ್ರಾರಂಭವಾಗಿ ದ್ಯಾಮೇನಹಳ್ಳಿ, ರಾಮಗೊಂಡನಹಳ್ಳಿ, ಅತ್ತಿಗೆರೆ, ಚಿಕ್ಕತೊಗಲೇರಿ, ಹಿರೇತೊಗಲೇರಿ, ಕುರ್ಕಿ, ರಂಗವ್ವನಹಳ್ಳಿ, ತೋಳಹುಣಸೆ, ಆವರಗೆರೆ, ಚಿಕ್ಕನಹಳ್ಳಿ, ಆನಗೋಡು, ದಾವಣಗೆರೆ ಕಸಬಾ, ಕುಂದವಾಡ, ಕರೂರು, ದೊಡ್ಡಬಾತಿ, ನೀಲಾನಹಳ್ಳಿ ಮುಖಾಂತರ ಹಾದು ಹೋಗಿ ದೊಗ್ಗಳ್ಳಿ ಗ್ರಾಮದ ಸ.ನಂ. 256 ಮತ್ತು 257ರಲ್ಲಿ 119.51 ಕಿ.ಮೀ.ನಲ್ಲಿ ಅಂತ್ಯಗೊಂಡು ಮುಂದೆ ಹರಿಹರ ತಾಲ್ಲೂಕಿನಲ್ಲಿ ಮುಂದುವರೆಯುತ್ತದೆ. (ಓವರ್‌ಲ್ಯಾಪ್ ಉದ್ದ 0.76 ಕಿ.ಮೀ.) ಈ ಓವರ್‌ಲ್ಯಾಪ್ ರಾಷ್ಟ್ರೀಯ ಹೆದ್ದಾರಿ-4 ದಾವಣಗೆರೆ ತಾಲ್ಲೂಕಿನ ಆವರಗೆರೆ ಗ್ರಾಮದ ಸರ್ವೆ ನಂ. 159, 59 ಮತ್ತು 61ರಲ್ಲಿ ಕಿ.ಮೀ. 103.98ರಿಂದ ಪ್ರಾರಂಭವಾಗಿ ಆವರಗೆರೆ ಗ್ರಾಮದ ಸರ್ವೆ ನಂ. 92 ಮತ್ತು 93ರಲ್ಲಿ ಕಿ.ಮೀ. 104.74ರಲ್ಲಿ ಅಂತ್ಯಗೊಳ್ಳುತ್ತದೆ. |
| | **ಹರಿಹರ ತಾಲ್ಲೂಕು** |
| | ಈ ರಾಜ್ಯ ಹೆದ್ದಾರಿಯು ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಅಮರಾವತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸ.ನಂ. 51 ಮತ್ತು 52ರ 119.51 ಕಿ.ಮೀ.ನಿಂದ ಪ್ರಾರಂಭವಾಗಿ ಹರಿಹರ (ಮಾಚೇನಹಳ್ಳಿ) ಹರಿಹರ (ಕಸಬಾ) ಮುಖಾಂತರ ತುಂಗಭದ್ರಾ ನದಿ ಸೇತುವೆ ಕಳಖಾದಿಯ ಅಪ್ರೋಚ್ ಸೇರಿಕೊಂಡಂತೆ ಹರಿಹರ (ಕಸಬಾ) ಸ.ನಂ. 10ರ 125.01 ಕಿ.ಮೀ.ವರೆಗೆ 5.50 ಕಿ.ಮೀ. ಹರಿಹರ ತಾಲ್ಲೂಕಿನಲ್ಲಿ ಹಾದು ಹೋಗಿ ಮುಂದೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮುಂದುವರೆಯುತ್ತದೆ. |

| ರಾಜ್ಯ ಹೆದ್ದಾರಿ ಸಂಖ್ಯೆ | ಹೆದ್ದಾರಿಯ ವಿವರ |
|---|---|
| ರಾಜ್ಯ ಹೆದ್ದಾರಿ 76 | **ರಾಣೇಬೆನ್ನೂರ ತಾಲ್ಲೂಕು:** |
| | ಹಾವೇರಿ ಜಿಲ್ಲೆ ರಾಣೇಬೆನ್ನೂರ ತಾಲೂಕಿನ ಸರಹದ್ದಿನಿಂದ ಪ್ರಾರಂಭಗೊಂಡು ರಾಷ್ಟ್ರೀಯ-4ರ ಉಳಿಕೆ ಭಾಗ ಸೇರಿಸಿಕೊಂಡು ಕೋಡಿಯಾಲ ಗ್ರಾಮದ ಸರ್ವೆ ನಂ. 4(ಬಲಕ್ಕೆ) 7(ಎಡಕ್ಕೆ)ರ ಕಿಮೀ 125.01 ರಿಂದ ಪ್ರಾರಂಭವಾಗಿ ನಂತರ ಪುಣಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-4ರ 6.60 ಕಿಮೀ ಓವರಲ್ಯಾಪ್ ಇರುತ್ತದೆ-ಎಣ್ಣೆಹೊಸಳ್ಳಿ-ಚಳಗೇರಿ-ದೇವನಗೊಂಡನಟ್ಟಿ-ಇಟಗಿ-ಹಲಗೇರಿ-ಬೆನಕನಕೊಂಡ-ಕುಸಗೂರು ಗ್ರಾಮಗಳ ಮುಖಾಂತರ ಹಾಯ್ದು ಹೆಡೆಯಾಲ ಗ್ರಾಮದ ಸರ್ವೆ ನಂ. 133(ಬಲಕ್ಕೆ) 132(ಎಡಕ್ಕೆ) ರ ಕಿಮೀ 157.48 ಕ್ಕೆ ಅಂತ್ಯಗೊಂಡು ಹಿರೇಕೆರೂರು ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ |
| | **ಹಿರೇಕೆರೂರು ತಾಲ್ಲೂಕು:** |
| | ಹಿರೇಕೆರೂರು ತಾಲೂಕಿನ ಲಿಂಗದೇವರಕೊಪ್ಪ (ಬತ್ತಿಕೊಪ್ಪ) ಗ್ರಾಮದ ಸರ್ವೆ ನಂ. 31(ಬಲಕ್ಕೆ) 32(ಎಡಕ್ಕೆ) ರ ಕಿಮೀ 157.48 ರಿಂದ ಪ್ರಾರಂಭವಾಗಿ ವಡೇರಾಯನಹಳ್ಳಿ-ಕೋಡ-ಸುತ್ತಕೋಟಿ-ಬೋಗಾವಿ ಗ್ರಾಮಗಳ ಮುಖಾಂತರ ಹಾಯ್ದು ಹಂಸಭಾವಿ ಗ್ರಾಮದ ಸರ್ವೆ ನಂ. 89(ಬಲಕ್ಕೆ) 88(ಎಡಕ್ಕೆ) ರ ಕಿಮೀ 176.29 ಕ್ಕೆ ಅಂತ್ಯಗೊಂಡು ಬ್ಯಾಡಗಿ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ |
| | **ಬ್ಯಾಡಗಿ ತಾಲ್ಲೂಕು:** |
| | ಬ್ಯಾಡಗಿ ತಾಲೂಕಿನ ಚಿಕ್ಕಅಣಜಿ ಗ್ರಾಮದ ಸರ್ವೆ ನಂ. 106(ಬಲಕ್ಕೆ) 107(ಎಡಕ್ಕೆ) ರ ಕಿಮೀ 176.29 ರಿಂದ ಪ್ರಾರಂಭವಾಗಿ ತುಮರಿಕೊಪ್ಪ ಗ್ರಾಮದ ಸರ್ವೆ ನಂ. 61(ಬಲಕ್ಕೆ) 61(ಎಡಕ್ಕೆ) ರ ಕಿಮೀ 181.35 ಕ್ಕೆ ಅಂತ್ಯಗೊಂಡು ಹಿರೇಕೆರೂರು ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ |
| | **ಹಿರೇಕೆರೂರು ತಾಲ್ಲೂಕು:** |
| | ಹಿರೇಕೆರೂರು ತಾಲೂಕಿನ ಮಡ್ಲೂರು ಗ್ರಾಮದ ಸರ್ವೆ ನಂ. 146(ಬಲಕ್ಕೆ) 164(ಎಡಕ್ಕೆ) ರ ಕಿಮೀ 181.35 ರಿಂದ ಪ್ರಾರಂಭವಾಗಿ ಅದೇ ಮಡ್ಲೂರು ಗ್ರಾಮದ ಸರ್ವೆ ನಂ. 92(ಬಲಕ್ಕೆ) 79(ಎಡಕ್ಕೆ) ರ ಕಿಮೀ 185.73 ಕ್ಕೆ ಅಂತ್ಯಗೊಂಡು ಬ್ಯಾಡಗಿ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ |
| | **ಬ್ಯಾಡಗಿ ತಾಲ್ಲೂಕು:** |
| | ಬ್ಯಾಡಗಿ ತಾಲೂಕಿನ ತಿಮ್ಮಾಪೂರ ಗ್ರಾಮದ ಸರ್ವೆ ನಂ. 45(ಬಲಕ್ಕೆ) 46(ಎಡಕ್ಕೆ) ರ ಕಿಮೀ 185.73 ರಿಂದ ಪ್ರಾರಂಭವಾಗಿ ಗುಡ್ಡದಮಲ್ಲಾಪೂರ ಗ್ರಾಮದ ಸರ್ವೆ ನಂ. 53(ಬಲಕ್ಕೆ) 51(ಎಡಕ್ಕೆ) ರ ಕಿಮೀ 188.00 ಕ್ಕೆ ಅಂತ್ಯಗೊಂಡು ಹಿರೇಕೆರೂರು ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ |
| | **ಹಿರೇಕೆರೂರು ತಾಲ್ಲೂಕು:** |
| | ಹಿರೇಕೆರೂರು ತಾಲೂಕಿನ ಕಚವಿ ಗ್ರಾಮದ ಸರ್ವೆ ನಂ.45(ಬಲಕ್ಕೆ) 46(ಎಡಕ್ಕೆ) ರ ಕಿಮೀ 188.00 ರಿಂದ ಪ್ರಾರಂಭವಾಗಿ ಅದೇ ಕಚವಿ ಗ್ರಾಮದ ಸರ್ವೆ ನಂ. 30(ಬಲಕ್ಕೆ) 31(ಎಡಕ್ಕೆ) ರ ಕಿಮೀ 189.00 ಕ್ಕೆ ಅಂತ್ಯಗೊಂಡು ಹಾನಗಲ್ ತಾಲ್ಲೂಕಿನಲ್ಲಿ ಮುಂದುವರಿಯುತ್ತದೆ. |
| | **ಹಾನಗಲ್ಲ ತಾಲ್ಲೂಕು:** |
| | ಹಾನಗಲ್ಲ ತಾಲೂಕಿನ ಕೆ ಪ್ಪಗೊಂಡನಕೊಪ್ಪ ಗ್ರಾಮದ ಸರ್ವೆ ನಂ. 55(ಎಡಕ್ಕೆ) 5(ಬಲಕ್ಕೆ) ರ ಕಿಮೀ 189.00 ರಿಂದ ಪ್ರಾರಂಭವಾಗಿ ತಿಳವಳ್ಳಿ-ಇನಾಂಲಕಮಾಪುರ-ಹೊಂಕಣ-ಮಕರವಳ್ಳಿ-ಗೊಂದಿ-(ಪಡುಬಿದ್ರಿ-ಚಿಕ್ಕಾಲಗುಡ್ಡ ರಾಜ್ಯ ಹೆದ್ದಾರಿ-1 ರ ಓವರಲ್ಯಾಪ್ ಚೈ: 260.19 ರಿಂದ 262.37 ರವರೆಗೆ ಒಟ್ಟು 2.18 ಕಿಮೀ)-ಹಿರೇಕೌಂಶಿ-ಚಿಕ್ಕಾಂಶಿ-ಕ್ಯಾಸನೂರ-ಕೋಣನಕೊಪ್ಪ-ಹುಲಗಿನಹಳ್ಳಿ-ಇನಾಂನೀರಲಗಿ ಗ್ರಾಮಗಳ ಮುಖಾಂತರ ಹಾಯ್ದು ಹೆರಳಿಕೊಪ್ಪ ಗ್ರಾಮದ ಸರ್ವೆ ನಂ.43(ಎಡಕ್ಕೆ) 38(ಬಲಕ್ಕೆ) ರ ಕಿಮೀ 217.19 ಕ್ಕೆ ಇದೇ ತಾಲ್ಲೂಕಿನಲ್ಲಿ ಮುಕ್ತಾಯವಾಗುತ್ತದೆ. |

**ರಾಜ್ಯ ಹೆದ್ದಾರಿ ಉದ್ದ 2.7.19 ಕಿ.ಮೀ ಇರುವುದು**

ಪಿ.ಆರ್. 258

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಮಂಜುಳ**

ವಿಶೇಷಾಧಿಕಾರಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಸಹಕಾರ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಿಒ 34 ಸಿಎಸ್‌ಎಸ್ 2009, ಬೆಂಗಳೂರು, ದಿನಾಂಕ: 10ನೇ ಫೆಬ್ರವರಿ 2009**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಶಿಕಾರಿಪುರ ಮತ್ತು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಶಿಕಾರಿಪುರ ಇವುಗಳ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಶಿಕಾರಿಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ**

ಶ್ರೀ ಎನ್. ಪಕ್ಕೀರಪ್ಪ ಬಿನ್ ಚಿನ್ನಪ್ಪ ಕಲ್ಮನೆ, ಶಿಕಾರಿಪುರ ತಾ:

**ಶಿಕಾರಿಪುರ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.,**

1. ಶ್ರೀ ಶಾಂತಪ್ಪ ಬಿನ್ ಹುಚ್ಚರಾಯಪ್ಪ, ಪುನೇದಹಳ್ಳಿ ಅಂಚೆ, ಸಂಡ ಶಿಕಾರಿಪುರ ತಾಲ್ಲೂಕು
2. ಶ್ರೀ ಜಿ. ಚಂದ್ರಪ್ಪ ಬಿನ್ ಬಸಪ್ಪ ದಿಂಡದಹಳ್ಳಿ ಅಂಚೆ, ಕಿಟ್ಟದಹಳ್ಳಿ, ಶಿಕಾರಿಪುರ ತಾಲ್ಲೂಕು
3. ಶ್ರೀಮತಿ ಹೆಚ್.ಎಸ್. ಲತಾ ಕೋಂ ಶಶಿಧರ ಈಸೂರು, ಶಿಕಾರಿಪುರ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 129

ಅಧಿಸೂಚನೆ

**ಸಂಖ್ಯೆ: ಸಿಒ 131 ಸಿಎಸ್‌ಎಸ್ 2008, ಬೆಂಗಳೂರು, ದಿನಾಂಕ: 9ನೇ ಫೆಬ್ರವರಿ 2009**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮತ್ತು ಪ್ರಕರಣ 53ಎ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಬಿಜಾಪುರ ಜಿಲ್ಲೆ ಮತ್ತು ತಾಲ್ಲೂಕಿನ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚಿಕ್ಕಗಲಗಲಿ, ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಪ್ರಕರಣ 29(1)ರ ಅಡಿಯಲ್ಲಿ**

1. ಶ್ರೀ ಹಣಮಂತ ಭೀಮಪ್ಪ ಕೊಣ್ಣೂರ, ಸಾ:ಕವಟಗಿ ತಾ: ಜಮಖಂಡಿ, ಬಾಗಲಕೋಟೆ ಜಿಲ್ಲೆ
2. ಶ್ರೀಮತಿ ಗೀತಾಬಾಯಿ ತುಳಸಿಗೇರಿ, ಸಾ: ಹಗೇತಾಳ, ಕೋಲಾರ ತಾಲ್ಲೂಕು, ಬಿಜಾಪುರ ಜಿಲ್ಲೆ
3. ಶ್ರೀ ಬಾಲಪ್ಪ ದೇವನಾಳ, ಸಾ: ಯಡಹಳ್ಳಿ ತಾ: ಬೀಳಗಿ, ಬಾಗಲಕೋಟೆ ಜಿಲ್ಲೆ

**ಪ್ರಕರಣ 53ಎ ಅಡಿಯಲ್ಲಿ**

1. ಶ್ರೀ ಮಲ್ಲಪ್ಪ ಶಂಬೋಜಿ, ಗಲಗಲಿ, ತಾ: ಬೀಳಗಿ, ಬಾಗಲಕೋಟೆ ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 130

ಅಧಿಸೂಚನೆ

**ಸಂಖ್ಯೆ: ಸಿಒ 187 ಸಿಎಸ್‌ಎಸ್ 2008, ಬೆಂಗಳೂರು, ದಿನಾಂಕ: 6ನೇ ಫೆಬ್ರವರಿ 2009**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಮತ್ತು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಕನಕಪುರ ಇವುಗಳ ಆಡಳಿತ ಮಂಡಳಿಗಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು

ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಕನಕಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,**

ಶ್ರೀ ಶಿವಣ್ಣಗೌಡ ಬಿನ್ ಲೇಟ್ ಸಣ್ಣೇಗೌಡ, ಸಂಗಮ ರಸ್ತೆ, ದೊಡ್ಡ ಆಲಹಳ್ಳಿ ಉಯ್ಯಂಬಳ್ಳಿ ಹೋಬಳಿ ಕನಕಪುರ ತಾಲ್ಲೂಕು

**ಕನಕಪುರ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.,**

1. ಶ್ರೀ ಟಿ.ಪಿ. ರಾಜು ಬಿನ್ ವೆಂಕಟೇಗೌಡ, ತೋಟಹಳ್ಳಿ, ಸಾತನೂರು ಹೋಬಳಿ, ಅಚ್ಚಲು ಅಂಚೆ, ಕನಕಪುರ ತಾ:
2. ಶ್ರೀಮತಿ ಪದ್ಮಾವತಿ ಕೋಂ ಕೃಷ್ಣೇಗೌಡ ಚಿಕ್ಕೊಪ್ಪ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು
3. ಶ್ರೀ ಹುಚ್ಚೀರಯ್ಯ ಬಿನ್ ಲೇ ಕೆಂಪಲಿಂಗಯ್ಯ, ಶಿವನಹಳ್ಳಿ ಕಸಬಾ ಹೋಬಳಿ, ಕನಕಪುರ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 131

## ನಗರಾಭಿವೃದ್ಧಿ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ನಅಇ 860 ಮೈಅಪ್ರಾ 2008, ಬೆಂಗಳೂರು, ದಿನಾಂಕ: 18ನೇ ಫೆಬ್ರವರಿ 2009**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1987ರ ಕಲಂ 3(3)(ಎ) ಮತ್ತು (4) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎ.ಕೆ. ಪಾಲಾಕ್ಷ, ಮಡಿಕೇರಿ, ಕೊಡಗು ಜಿಲ್ಲೆ ಇವರನ್ನು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಸರ್ಕಾರದ ಇಚ್ಛಾನುಸಾರ ಅಥವಾ ಮೂರು ವರ್ಷಗಳ ಅವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಪಿ.ಆರ್. 155

## ಒಳಾಡಳಿತ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ ಒಇ 207 ಪಿಎಂಎಸ್ 2008, ಬೆಂಗಳೂರು, ದಿನಾಂಕ: 12ನೇ ಫೆಬ್ರವರಿ 2009**

1872ರ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಕಾಯಿದೆಯ 9ನೇ ಕಲಂನಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇಂಡಿಯನ್ ಕ್ರಿಶ್ಚಯನ್ ಮ್ಯಾರೇಜ್ (ಕರ್ನಾಟಕ) ನಿಯಮಗಳು 1961 ರಂತೆ ಕಾರ್ಯನಿರ್ವಹಿಸಲು ಪಾಸ್ಟರ್ ರವಿ ಡ್ಯಾನಿಯಲ್, ಗೇಟ್ ಆಫ್ ಹೆವನ್ ಮಿನಿಸ್ಟ್ರಿ ಟ್ರಸ್ಟ್ ನಂ 7/123, 6ನೇ ಕ್ರಾಸ್ (ಹಳೆ ಪೋಸ್ಟ್ ಆಫೀಸ್ ರಸ್ತೆ ), ಲಿಂಗರಾಜಪುರಂ, ಬೆಂಗಳೂರು–560 084 ಇವರಿಗೆ ಮೇಲಿನ ಕಾಯ್ದೆಯಡಿಯಲ್ಲಿ ಬೆಂಗಳೂರು ಜಿಲ್ಲೆ ಆಡಳಿತ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಿ, ವಿವಾಹ ವಿಧಿಯನ್ನು ನೆರವೇರಿಸಲು ಸದರಿ ಕಾಯ್ದೆಯಡಿಯಲ್ಲಿ ಸೂಚಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅನುಮತಿಯನ್ನು ಈ ಮೂಲಕ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆಲಿಸ್ ಗೊನ್ಸಾಲ್ವಿಸ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ರಹದಾರಿ ಮತ್ತು ವಿದೇಶಿಯರು)

ಪಿ.ಆರ್. 158

## ಸಹಕಾರ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಇ 89 ಎಂಆರ್‌ಇ 2008, ಬೆಂಗಳೂರು, ದಿನಾಂಕ: 17ನೇ ಫೆಬ್ರವರಿ 2009**

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1959ರ ಕಲಂ 11(1)(ix)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ "ಶ್ರೀ ಶಶಿಧರ ಎಗನೂರ, ರಾಯಚೂರು" ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿ.ಕೆ. ವಾಸುದೇವ ಮೂರ್ತಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 160